ಇ.ಸಿ.ಎ ನಂಃ 12/2023
ಪಿ.ಡಬ್ಲ್ಯೂಃ 1

<u>ದಿನಾಂಕಃ 14-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 1 ನೇ ಎದುರುದಾರ ಪರಃ ಶ್ರೀ ಬಿ.ಜಿ.ಕೆ. ವಕೀಲರಿಂದಃ-</u>

ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ಘಟನಾ ಕಾಲಕ್ಕೆ ನನ್ನ ಜೊತೆ ಅನಿಲ್, ಸುರೇಶ್, ಕೀರ್ತಿ, ಅಶೋಕ ಕೆಲಸ ಮಾಡುತ್ತಿದ್ದರು. ತೋಟದಲ್ಲಿ ಕೆಲಸ ಮಾಡುವಾಗ ಬೇರೆಯವರಿಗೆ ಎಷ್ಟು ಕೂಲಿ ಕೊಡುತ್ತಾರೋ ಅಷ್ಟೇ ಕೂಲಿ ಮತ್ತು ಇತರ ಸವಲತ್ತುಗಳನ್ನ ಕೊಡುತ್ತಾರೆ ಎಂದರೆ ಸರಿ. ನನ್ನ ಆಸ್ಪತ್ರೆ ಖರ್ಚನ್ನ 1 ನೇ ಎದುರುದಾರ ಎಸ್ಟೇಟ್ ಪಾವತಿ ಮಾಡಿದೆ ಎಂದರೆ ಸರಿ. ಘಟನೆ ಕಾಲಕ್ಕೆ ನನಗೆ 25 ವರ್ಷ ವಯಸ್ಸಾಗಿತ್ತು ಮತ್ತು ನಾನು ರೂ.376.88/- ಪಾವತಿ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ 24 ವರ್ಷ ವಯಸ್ಸಾಗಿದ್ದು ಘಟನೆ ಕಾಲಕ್ಕೆ ನನಗೆ ಪ್ರತಿ ದಿನ 600 ರೂಪಾಯಿ ಕೂಲಿ ಇತ್ತು ಎನ್ನುತ್ತಾರೆ. ಹೆಚ್ಚಿನ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸೃಷ್ಟಿಸಿದ ದಾಖಲೆಗಳನ್ನ ನ್ಯಾಯಾಲಯದ ಮುಂದೆ ಹಾಜರು ಮಾಡಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- 2 ನೇ ಎದುರುದಾರ ಪರಃ ಶ್ರೀ ಜಿ.ಆರ್.ಎಂ. ವಕೀಲರಿಂದಃ-</u>

ನಾನು ಘಟನೆ ಸಂಬಂಧ ಪೊಲೀಸರಿಗೆ ದೂರು ಕೊಟ್ಟಿಲ್ಲ. ನಾನು 1 ನೇ ಎದುರುದಾರರ ತೋಟದಲ್ಲಿ 7 ರಿಂದ 8 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಕೂಲಿಗೆ ಹಾಜರಾದ ಬಗ್ಗೆ ಮತ್ತು ಕೂಲಿ ಪಡೆದ ಬಗ್ಗೆ ಹಾಜರಾತಿ

ಮತ್ತು ವೇತನ ಬಟವಡೆ ವಹಿಯಲ್ಲಿ ಸಹಿ ಹಾಕುತ್ತಿದ್ದೆ. ಘಟನೆ ಸಂಭವಿಸಿದ ಕೂಡಲೇ ನನ್ನನ್ನ ನನ್ನ ಅಣ್ಣ ಆಸ್ಪತ್ರೆಗೆ ಕರೆದುಕೊಂಡು ಬಂದರು. ಘಟನೆ ಕಾಲಕ್ಕೆ ನನ್ನ ಅಣ್ಣ ನನ್ನೊಟ್ಟಿಗೆ ಕೆಲಸ ಮಾಡುತ್ತಿದ್ದ. ನನ್ನ ಅಣ್ಣನ ಹೆಸರು ಸುರೇಶ್. ನನ್ನ ಅಣ್ಣ ಸಹ ಹಾಜರಾತಿಗೆ ಸಹಿ ಮಾಡುತ್ತಿದ್ದರು ಮತ್ತು ಕೂಲಿ ಪಡೆದ ಕಾಲಕ್ಕೆ ವೇತನ ಬಟವಡೆ ವಹಿಗೆ ಸಹಿ ಮಾಡುತ್ತಿದ್ದರು. ಘಟನೆ ಕಾಲಕ್ಕೆ ನನ್ನ ಜೊತೆ ಸುಮಾರು 10 ಜನ ಕೆಲಸ ಮಾಡುತ್ತಿದ್ದರು. ನನ್ನ ಜೊತೆ ಕೆಲಸ ಮಾಡುತ್ತಿದ್ದವರನ್ನ ನ್ಯಾಯಾಲಯದ ಮುಂದೆ ಕರೆಸಿ ಘಟನೆ ಸಂಬಂಧ ಸಾಕ್ಷಿ ನುಡಿಸಲು ನನಗೇನೂ ಅಭ್ಯಂತರ ಇಲ್ಲ. 1 ನೇ ಎದುರುದಾರರ ತೋಟದಲ್ಲಿ ಯಾವುದೇ  ಘಟನೆ ಸಂಭವಿಸಿಲ್ಲ ಮತ್ತು ಬೆನ್ನು ಮೂಳೆ ಮುರಿದಿಲ್ಲ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಬೇಕೆಂಬ ಉದ್ದೇಶಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಚಿಕಿತ್ಸೆಗೆ ಹೋದಾಗ ನನಗೆ ಎಲ್ಲಿ, ಯಾವ ಕಾರಣಕ್ಕಾಗಿ ಗಾಯ ಆಗಿದೆ ಎಂದು ತಿಳಿಸಿದ್ದೇನೆ. ನಾನು ಬೇರೆ ಕಡೆ ಮಾಡಿಕೊಂಡ ಗಾಯಕ್ಕೆ ಹಾಸನ ಮತ್ತು ಮಂಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಂಗಳೂರಿನಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಮತ್ತು ನನಗೆ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಅಳವಡಿಸಲಾಗಿದೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ 3 ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಈ ಅರ್ಜಿ ಸಲ್ಲಿಸುವ ಮೊದಲು 2 ನೇ ಎದುರುದಾರ ಸಂಸ್ಥೆಗೆ ಯಾವುದೇ

ತಿಳುವಳಿಕೆ ನೋಟೀಸ್ ಕಳುಹಿಸಿಲ್ಲ. 1 ನೇ ಎದುರುದಾರರ ತೋಟದಲ್ಲಿ ಕೆಲಸ ಮಾಡುವಾಗ ಯಾವುದೇ ಘಟನೆ ಸಂಭವಿಸದೇ ಇದ್ದುದರಿಂದ ಈ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ನಾನು 2 ನೇ ಎದುರುದಾರ ಸಂಸ್ಥೆಗೆ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ವಯಸ್ಸನ್ನ ರುಜುವಾತು ಮಾಡಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ನನ್ನ ವಯಸ್ಸನ್ನ ರುಜುವಾತು ಮಾಡಲು ಶಾಲಾ ದಾಖಲಾತಿಗಳನ್ನ ನ್ಯಾಯಾಲಯದ ಮುಂದೆ ಹಾಜರು ಮಾಡಲು ನನಗೇನೂ ಅಭ್ಯಂತರ ಇಲ್ಲ. ನನ್ನ ಕುಟುಂಬಕ್ಕೆ ಬಿ.ಪಿ.ಎಲ್ ಮಾದರಿಯ ಪಡಿತರ ಚೀಟಿ ಇದೆ. ಅದನ್ನ ನ್ಯಾಯಾಲಯದ ಮುಂದೆ ಹಾಜರು ಮಾಡಲು ನನಗೇನೂ ಅಭ್ಯಂತರ ಇಲ್ಲ. ಅಪಘಾತ ಕಾಲಕ್ಕೆ ನನಗೆ 30 ವರ್ಷಗಳಿಗಿಂತಾ ಮೇಲ್ಪಟ್ಟು ವಯಸ್ಸಾಗಿರುವುದರಿಂದ ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿ ದಿನ ರೂ.600/- ಕೂಲಿ ಪಡೆಯುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರ ಸಂಸ್ಥೆಯಿಂದ ಅಕ್ರಮ ಲಾಭ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲಾತಿ ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಇ.ಸಿ.ಎ ನಂಃ 12/2023
ಪಿ.ಡಬ್ಲ್ಯೂಃ 1

ಎಸ್ಆರ್ಃ

ಇ.ಸಿ.ಎ ನಂಃ 12/2023
ಪಿ.ಡಬ್ಲ್ಯೂಃ 1